6	ಭಕ್ತರಹಳ್ಳಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ	07
7	ತಿಮಕ, ಕುಣಿಗಲ್ ತಾಲ್ಲೂಕು ತುಮಕೂರು ಜಿಲ್ಲೆ	02
8	ಅಮ್ಮೃತೂರು ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ	08
9	ಚೌಡನಕುಪ್ಪೆ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ	–

ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚೌಡನಕುಪ್ಪೆ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ ಈ ಕಾಲೇಜಿಗೆ ನಿವೇಶನದ ಸಮಸ್ಯೆಯಿಂದ ಕೊಠಡಿಗಳನ್ನು ನಿರ್ಮಿಸಲಾಗಿರುವುದಿಲ್ಲ.

ಶುದ್ಧ ಕುಡಿಯುವ ನೀರಿನ ಘಟಕಗಳು

2514(3400); ಶ್ರೀ ನಾಗರಾಜಯ್ಯ ಡಿ. (ಕುಣಿಗಲ್)

ಅ) ತುಮಕೂರು ಜಿಲ್ಲೆಯ ಕುಣಿಗಲ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಕುಡಿಯುವ ನೀರಿನ ಕೊಳವೆ ಬಾವಿಗಳಲ್ಲಿ ಫ್ಲೋರೈಡ್ ಅಂಶ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಾಗಿದ್ದಲ್ಲಿ, ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಎಲ್ಲೆಲ್ಲಿ ಪ್ರಾರಂಭಿಸಲಾಗಿದೆ ಹಾಗೂ ಮುಂಬರುವಲ್ಲೆಲ್ಲಿ ಪ್ರಾರಂಭಿಸಲಾಗುವುದು (ಸಂಪೂರ್ಣ ವಿವರ ನೀಡುವುದು)?

ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಬಂದಿದೆ.

ಆ) 2014–15ನೇ ಸಾಲಿನ 2000 ನೀರು ಶುದ್ಧೀಕರಣ ಘಟಕಗಳ ಅಳವಡಿಕೆ ಪೈಕಿ ಮೊದಲ ಹಂತದಲ್ಲಿ 1000 ಜನವಸತಿಗಳನ್ನು ಆಯ್ಕೆ ಮಾಡಿ ಆಡಳಿತಾತ್ಮಕ ಅನುಮೋದನೆಯನ್ನು ದಿನಾಂಕ:30.01.2015ರಲ್ಲಿ ಹೊರಡಿಸಿದೆ. ಈ ಆದೇಶದಲ್ಲಿ ಆಯ್ಕೆ ಮಾಡಲಾದ ಜನವಸತಿಗಳ ವಿವರ ಈ ಕೆಳಕಂಡಂತಿವೆ. 1) ಮಾದಗೊನಹಳ್ಳಿ 2) ಪಾವಸಂದ್ರ 3) ಹೆರೂರು 4) ಜಿನ್ನಗರ 5) ಹಲಗೆರೆ 6) ಸುಗ್ಗನಹಳ್ಳಿ 7) ಪಿ. ಹೊನ್ನಮಾಚನಹಳ್ಳಿ 8) ಬೆಟ್ಟಹಳ್ಳಿ 9) ದೊಡ್ಡಕಲ್ಲಹಳ್ಳಿ 10) ಹಂಗರಹಳ್ಳಿ 11) ಉಜ್ಜನಿ 12) ಯೆಲಕಡಕಲ್ಲು 13) ಕೀಲಾರ 14) ಉಂಗ್ರ 15) ಯಲಿಯೂರು 16) ಮಾದಪ್ಪನಹಳ್ಳಿ.

ಹಜ್ ಯಾತ್ರಾರ್ಥಿಗಳ ಆಯ್ಕೆಗೆ ಬಳಸುವ ಮಾನದಂಡ

2515(2928); ಶ್ರೀ ನಾರಾಯಣ ಗೌಡ (ಕೆ.ಆರ್.ಪೇಟೆ)

ಅ) ರಾಜ್ಯದಲ್ಲಿ ಹಜ್ ಯಾತ್ರೆಗೆ ಯಾತ್ರಾರ್ಥಿಗಳನ್ನು ಆಯ್ಕೆ ಮಾಡುವಾಗ ಬಳಸುವ ಮಾನದಂಡವೇನು?

ಆ) ಕಳೆದ 3 ವರ್ಷಗಳಿಂದ ಹಜ್ ಯಾತ್ರೆಗೆ ಸರ್ಕಾರವು ನೀಡಿದ ಅನುದಾನವೆಷ್ಟು

ಇ) ಕಳೆದ 3 ವರ್ಷಗಳ ಅವಧಿಯಲ್ಲಿ ಮಂಡ್ಯ ಜಿಲ್ಲೆಯಿಂದ ಎಷ್ಟು ಜನರನ್ನು ಹಜ್ ಯಾತ್ರೆಗೆ ಆಯ್ಕೆ ಮಾಡಲಾಗಿದೆ. (ಕ್ಷೇತ್ರವಾರು ವಿವರ ನೀಡುವುದು) ಇದರಲ್ಲಿ ಕ್ಷೇತ್ರವಾರು ತಾರತಮ್ಯವಿದೆಯೇ?

ಶ್ರೀ ಆರ್. ರೋಷನ್‌ಬೇಗ್ (ಮೂಲಭೂತ ಸೌಲಭ್ಯ ಅಭಿವೃದ್ಧಿ ಹಾಗೂ ವಾರ್ತಾ ಮತ್ತು ಹಜ್ ಸಚಿವರು)

ಅ) ಮುಂಬೈನ ಭಾರತೀಯ ಹಜ್ ಸಮಿತಿಯು ಭಾರತೀಯ ವಿದೇಶಾಂಗ ಸಚಿವಾಲಯದ ಅನುಮೋದನೆಯೊಂದಿಗೆ ಹೊರಡಿಸಿರುವ ಮಾರ್ಗಸೂಚಿಯ ಅನ್ವಯ ಯಾವುದೇ ಭಾರತೀಯ ಮುಸಲ್ಮಾನರು ಹಜ್ ಯಾತ್ರೆಗೆ ಅರ್ಜಿಯನ್ನು ಸಲ್ಲಿಸಬಹುದಾಗಿದ್ದು, ಭಾರತೀಯ